# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಕೆ.ಹನುಮಂತಪ್ಪ, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುಳ್ಯ ಇವರು ಕೆ.ಎ.ಟಿ.ಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ:3140/2011ರ ಆದೇಶದಂತೆ ದಂಡನೆಯನ್ನು ಮಾರ್ಪಡಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 213 ವಿಸೇಬಿ 1997 ದಿನಾಂಕ: 26-06-1999.

2. ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ: ಸಂಖ್ಯೆ: 3140/2011ರ ತೀರ್ಪಿನ ದಿನಾಂಕ: 05-06-2013.

------

ಪ್ರಸ್ತಾವನೆ:

ಶ್ರೀ ಕೆ.ಹನುಮಂತಪ್ಪ, ಇವರು ಕ್ಷೇತ್ರಾಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುಳ್ಯ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಕೈಗೊಂಡು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ: 26-06-1999ರ ಆದೇಶದಲ್ಲಿ ರೂ.31.370/- ಗಳನ್ನು ವಸೂಲು ಮಾಡುವ ಮತ್ತು ಅವರ ವೇತನವನ್ನು ರೂ. 7400-13120 ರಿಂದ 6000-11200ಕ್ಕೆ 5 ವರ್ಷಗಳ ಕಾಲ ಕೆಳದರ್ಜೆಗೆ ಇಳಿಸುವ ದಂಡನೆಯನ್ನು ವಿಧಿಸಲಾಗಿತ್ತು. ಈ ಆದೇಶವನ್ನು ಸದರಿಯವರು ಅರ್ಜಿ ಸಂಖ್ಯೆ: 3140/2011 ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದರು. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ಅರ್ಜಿಯನ್ನು ದಿನಾಂಕ: 5-6-2013 ರಂದು ಇತ್ಯರ್ಥಪಡಿಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

"In the result and for the reasons stated above, the application is allowed and the Order No. ಗ್ರಾಅಪ 213 ವಿಸೇಬಿ 1997 dated 26-06-1999 (Annexure-A5). So far it relates to the applicant is hereby quashed. If the amount mentioned in the impugned order has been recovered from the applicant it shall be refunded to him within 3 months from today".

ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದ್ದು, ಶ್ರೀ ಕೆ.ಹನುಮಂತಪ್ಪ, ಇವರಿಗೆ ಸರ್ಕಾರಿ ಆದೇಶ ದಿನಾಂಕ: 20-06-1999ರ ಆದೇಶದಲ್ಲಿ ವಿಧಿಸಲಾಗಿದ್ದ ದಂಡನೆಯನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 3140/2011 ದಿನಾಂಕ: 5-6-2013 ರಲ್ಲಿ ನೀಡಿರುವ ಆದೇಶದಂತೆ ಹಿಂಪಡೆಯಲು ನಿರ್ಣಯಿಸಿರುತ್ತದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ವಿಸೇಬಿ 2005, ಬೆಂಗಳೂರು, ದಿನಾಂಕ:24-05-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಕೆ.ಹನುಮಂತಪ್ಪ, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುಳ್ಯ ಇವರಿಗೆ ರೂ.31.370/- ಗಳನ್ನು ವಸೂಲು ಮಾಡುವ ಮತ್ತು ಇವರ ವೇತನವನ್ನು 5 ವರ್ಷಗಳವರೆಗೆ ವೇತನ ಶ್ರೇಣಿ

ರೂ.7400-13120 ರಿಂದ 6000-11200 ಗೆ ಕೆಳದರ್ಜೆಗೆ ಇಳಿಸುವ ದಂಡನೆಯನ್ನು ವಿಧಿಸಿರುವ ಸರ್ಕಾರದ ದಂಡನಾದೇಶ ಸಂಖ್ಯೆ: ಗ್ರಾಅಪ 213 ವಿಸೇಬಿ 97 ದಿನಾಂಕ: 26-06-1999 ನ್ನು ಈ ಮೂಲಕ ರದ್ದುಗೊಳಿಸಿದೆ. ತತ್ಪರಿಣಾಮವಾಗಿ ಅವರಿಗೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ಬಿಡುಗಡೆಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, (ಎ&ಇ) ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ, ಮಂಗಳೂರು.
3. ಜಂಟಿ ಕೃಷಿ ನಿರ್ದೇಶಕರು, ಮೈಸೂರು ಮತ್ತು ರಾಯಚೂರು ಜಿಲ್ಲೆ.
4. ಉಪ ಕೃಷಿ ನಿರ್ದೇಶಕರು, ರಾಯಚೂರು ವಿಭಾಗ, ರಾಯಚೂರು.
5. ಶ್ರೀ ಕೆ.ಹನುಮಂತಪ್ಪ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ನಂ.753, 9ನೇ ಮೇನ್, 'ಬಿ' ಬ್ಲಾಕ್, 3ನೇ ಹಂತ, ವಿಜಯನಗರ, ಮೈಸೂರು-17.

ಪ್ರತಿ ಮಾಹಿತಿಗಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ /ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ.ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ಮೇಲ್ವಿಚಾರಕರು, ಗಣಕ ಕೋಶ/ಹೆಚುವರಿ ಪ್ರತಿ

ಎಸ್‌ಬಿಪಿ/-